ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/47/ಸುತ್ತೋಲೆ/2016-17(ಭಾ-2)

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:06.04.2017

ಮೇಲ್ಕಂಡ ಸರ್ಕಾರದ ಸುತ್ತೋಲೆಯನ್ನು ಈ ಕೆಳಕಂಡವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ.
2) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಜಂಟಿ ನಿರ್ದೇಶಕರ ಮೂಲಕ)

ಪ್ರತಿಯನ್ನು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ವಿಕಾಸಸೌಧ, ಬೆಂಗಳೂರು-560 001.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 143 ಯುಎನ್ಇ 2017

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22-03-2017.

## ಸುತ್ತೋಲೆ

ವಿಷಯ: ವಿಶ್ವ ಜಲದಿನ ಆಚರಣೆ ಪ್ರಯುಕ್ತ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಜಾಗೃತಿ ಉಂಟು ಮಾಡುವ ಕುರಿತು.

***

ಜಗತ್ತಿನ ಸಕಲ ಜೀವರಾಶಿಗಳ ಜೀವ ದ್ರವ್ಯವಾದ ನೀರಿನ ಸದ್ಬಳಕೆ ಮತ್ತು ಸಂಗ್ರಹಣೆ ಇಂದು ಅತಿ ಮುಖ್ಯವಾಗಿದೆ. ನೀರಿಲ್ಲದೇ ಜೀವಿಗಳ ಬೆಳವಣಿಗೆ ಮತ್ತು ಬದುಕು ಅಸಾಧ್ಯ. ಜಗತ್ತಿನ ಆರ್ಥಿಕತೆಯು ನೀರಿನ ಲಭ್ಯತೆ ಮತ್ತು ಉಪಯೋಗ ಮೇಲೆ ನಿಂತಿದೆ. ಪ್ರಸ್ತುತ ಜಗತ್ತಿನ 66.3 ಕೋಟಿ ಜನರು ತೀವ್ರ ನೀರಿನ ಕೊರತೆಯನ್ನು ಅನುಭವಿಸುತ್ತಿದ್ದು, 800 ಮಕ್ಕಳು ಪ್ರತಿನಿತ್ಯ ನೀರಿನ ಕೊರತೆಯಿಂದಾಗಿ ಸಾವಿಗೀಡಾಗುತ್ತಿದ್ದಾರೆ. ಭಾರತದಲ್ಲಿನ 7.6 ಕೋಟಿ ಜನರು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದಾರೆ.

ವಿಶ್ವದ ಜನಸಂಖ್ಯೆಯ ಒಟ್ಟು ಶೇ.18 ರಷ್ಟನ್ನು ಭಾರತ ಹೊಂದಿದ್ದು, ಮಳೆಯ ಅಭಾವದಿಂದಾಗಿ ಭಾರತದ ಕೆಲವು ಭಾಗಗಳು ತೀವ್ರ ನೀರಿನ ಕೊರತೆಯನ್ನು ಎದುರಿಸುತ್ತಿದೆ. ಹವಾಮಾನ ವೈಪರೀತ್ಯದಿಂದಾಗಿ ಪ್ರಸ್ತುತ ಭಾರತದಾದ್ಯಂತ ತೀವ್ರ ಬರಗಾಲ ಎದುರಾಗಿದೆ. ಅಲ್ಲದೇ ಭತ್ತ ಮತ್ತು ಕಬ್ಬುಗಳಂತ ಅಧಿಕ ನೀರನ್ನು ಅಪೇಕ್ಷಿಸುವ ಬೆಳೆಗಳ ಕ್ಷೇತ್ರಗಳ ವಿಸ್ತರಣೆಯಿಂದ ಹಾಗೂ ಕಾರ್ಖಾನೆಗಳ ತ್ಯಾಜ್ಯಗಳ ಸೇರ್ಪಡೆಯಿಂದ ನೀರಿನ ಮೂಲಗಳು ಕಲುಷಿತಗೊಳ್ಳುವಿಕೆ ಹಾಗೂ ನಗರವಾಸಿಗಳ ಕುಡಿಯುವ ನೀರಿನ ವಿವೇಚನಾ ರಹಿತ ನೀರಿನ ಬಳಕೆ ಮತ್ತು ಅಂತರ್ಜಾಲದ ಅನಿಯಮಿತ ಬಳಕೆಗಳಿಂದ ನೀರಿನ ಮೂಲಗಳು ನಶಿಸಿ, ಮಾನವ ಹಾಗೂ ಪ್ರಾಣಿಗಳ ಉಪಯೋಗಕ್ಕೆ ಅಲಭ್ಯವಾಗಿ ಬತ್ತಿಹೋಗುತ್ತಿವೆ.

ನೀರಿಗಾಗಿ, ಮೈಲುಗಳಷ್ಟು ದೂರ ಅಲೆಯುವುದು ಸಾಮಾನ್ಯವಾಗಿದ್ದು, ಕಲುಷಿತ ನೀರಿನ ಬಳಕೆ ಕೊರತೆಯಿಂದಾಗಿ ಜಗತ್ತಿನಲ್ಲಿ ಭೀಕರ ಕಾಯಿಲೆಗಳು ಉಂಟಾಗುತ್ತಿರುವುದಾಗಿ ಯುನಿಸೆಫ್ ವರದಿಯಲ್ಲಿ ಉಲ್ಲೇಖಿಸಲಾಗಿದೆ. **"ಮಾರ್ಚ್ 22ರ ವಿಶ್ವ ಜಲದಿನದ"** ಈ ಸಂದರ್ಭದಲ್ಲಿ **"ನೀರನ್ನು ಏಕೆ ಪೋಲು ಮಾಡಬೇಕು?"** ಎಂಬ ಘೋಷವಾಕ್ಯವನ್ನು ಮೊಳಗಿಸಲಾಗಿದ್ದು, ನೀರಿನ ಸದ್ಬಳಕೆ ಹಾಗೂ ಸಂಗ್ರಹಣೆಯ ಕುರಿತು ಇಂದು ಆಂದೋಲನ ಕೈಗೊಳ್ಳಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಜಲಸಾಕ್ಷರತೆ, ಸಮಗ್ರ ನಿರ್ವಹಣೆ, ಅಂತರ್ಜಲ ಮರುಪೂರಣ, ಮಳೆ ಕೊಯ್ಲು ಪದ್ಧತಿ, ನೀರಿನ ಸಂರಕ್ಷಣೆ ಮತ್ತು ಸದ್ಬಳಕೆ ಕುರಿತು ಯುವ ಜನಾಂಗದಲ್ಲಿ ಜಾಗೃತಿ ಮೂಡಿಸಲು ರಾಜ್ಯದ ವಿಶ್ವವಿದ್ಯಾಲಯಗಳು ಕಾರ್ಯಪ್ರವೃತ್ತವಾಗಬೇಕಾಗಿದೆ. ಅಲ್ಲದೇ ಕರ್ನಾಟಕದಲ್ಲಿ ಪ್ರಸ್ತುತ ಎದುರಾಗಿರುವ ತೀವ್ರ ಬರಗಾಲ ಮತ್ತು ಅಂತರ್ಜಾಲ ಮಟ್ಟ ಕುಸಿಯುತ್ತಿರುವುದರಿಂದ, ನೀರಿನ ಕೊರತೆಯುಂಟಾಗಿದ್ದು, ಕೊರತೆ ಉಂಟಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ನೀರಿನ ಮಿತಬಳಕೆ ಹಾಗೂ ಬಳಸಿದ ನೀರಿನ ಸಂಸ್ಕರಣೆ ಮತ್ತು ಬಳಕೆ ಹಾಗೂ ಜಲಸಂಗ್ರಹದ ಕುರಿತು ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಲ್ಲದೇ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಜಾಗೃತಿ ಉಂಟು ಮಾಡಲು ಅಗತ್ಯ ಕಾರ್ಯಾಗಾರಗಳನ್ನು ಏರ್ಪಡಿಸಲು ಕ್ರಮವಹಿಸುವುದು.

(ಎನ್.ಶೀಲಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).